ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ

ENVIRONMENTAL MANAGEMENT & POLICY RESEARCH INSTITUTE

(ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಕರ್ನಾಟಕ ಸರ್ಕಾರದ ಅಧೀನದಲ್ಲಿ, ಕರ್ನಾಟಕ ಸಂಘ ಸಂಸ್ಥೆ ಕಾಯಿದೆ, 1960 ರಡಿಯಲ್ಲಿ ನೋಂದಾಯಿಸಲಾದ ಸಂಸ್ಥೆ.)

ISO 9001 : 2015 ಮತ್ತು OHSAS 18001 : 2007 ದೃಢೀಕರಿಸಲಾಗಿದೆ

(A society established under Forest Environment and Ecology Department, Government of Karnataka and registered under Karnataka Registration of Societies Act, 1960)

ISO 9001:2015 and OHAS 18001 : 2007 Certified

ಎಂಪ್ರಿ/ಸಿ.ಆರ್-02/ತರಬೇತಿ/~~2019-20~~ 2020-21 / 400 ದಿನಾಂಕ: 14-08-2020

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಆಯುಕ್ತರ ಅಪ್ತ ಶಾಖೆ. ಸಂಖ್ಯೆ 505 ದಿನಾಂಕ 24/08/2020

ATS-01 16483/2020

ಅವರಿಗೆ,
ಆಯುಕ್ತರು
ತಾಂತ್ರಿಕ ಶಿಕ್ಷಣ ಆಯುಕ್ತಾಲಯ,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಸಂಪಂಗಿರಾಮನಗರ
ಬೆಂಗಳೂರು.

ಮಾನ್ಯರೇ,

**ವಿಷಯ:** ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (ಎಂಪ್ರಿ)ಯು ಆಯೋಜಿಸುತ್ತಿರುವ ತರಬೇತಿ ಕಾರ್ಯಕ್ರಮಗಳಿಗೆ ನಿರುದ್ಯೋಗಿ ಡಿಪ್ಲೊಮೊ ಅಭ್ಯರ್ಥಿಗಳನ್ನು ನಿಯೋಜಿಸಿಕೊಡಲು ಕೋರಿ.

**ಉಲ್ಲೇಖ:**
1. ದಿನಾಂಕ: 01-04-2019 ರಂದು ಕಾರ್ಯದರ್ಶಿಗಳು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ರವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯ ನಡಾವಳಿಗಳನ್ವಯ.
2. ದಿನಾಂಕ: 16-08-2019 ಕಾರ್ಯದರ್ಶಿಗಳು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ರವರ ಅಧ್ಯಕ್ಷತೆಯಲ್ಲಿ ಜರುಗಿದ ಪರಿಶೀಲನಾ ಸಮಿತಿ ಸಭೆಯ ನಡಾವಳಿಗಳನ್ವಯ.
3. ದಿನಾಂಕ: 27-09-2019 ರಂದು ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ ಜರುಗಿದ ಅಧಿಕಾರಯುಕ್ತ ಸಮಿತಿ ಸಭೆಯ ನಡಾವಳಿಗನ್ವಯ.
4. ಸರ್ಕಾರಿ ಆದೇಶ ಸಂಖ್ಯೆ: ಕೌಉಜೀಇ 101 ಉಜೀಇ/2019, ಬೆಂಗಳೂರು, ದಿನಾಂಕ: 14-10-2019.

*******

ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (ಎಂಪ್ರಿ)ಯು ಕರ್ನಾಟಕ ಸರ್ಕಾರದ ಅಂಗಸಂಸ್ಥೆಯಾಗಿದ್ದು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದೆ. ಪರಿಸರಾತ್ಮಕ ವಿಷಯಗಳ ಕುರಿತು ಸಂಶೋಧನೆ, ಅಧ್ಯಯನ ಹಾಗೂ ಸಾಮರ್ಥ್ಯಾಭಿವೃದ್ಧಿ ಚಟುವಟಿಕೆಗಳನ್ನು ಹಮ್ಮಿಕೊಂಡು ಪರಿಸರ ಸಂರಕ್ಷಣೆ ಹಾಗೂ ನಿರ್ವಹಣೆಗಾಗಿ ಸಂಸ್ಥೆಯು ಅವಿರತವಾಗಿ ಶ್ರಮಿಸುತ್ತಿದೆ.

ಉಲ್ಲೇಖ (1) ರಿಂದ (4)ರ ಅನ್ವಯ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಅನುದಾನದೊಂದಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸಹಯೋಗದೊಂದಿಗೆ ಎಂಪ್ರಿ ಸಂಸ್ಥೆಯು ಮುಖ್ಯ ಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿಯಲ್ಲಿ ತ್ಯಾಜ್ಯ ಹಾಗೂ ತ್ಯಾಜ್ಯ ನೀರು ನಿರ್ವಹಣೆ ಘಟಕಗಳು-ತಂತ್ರಜ್ಞರು ಕುರಿತು ವಸತಿ ಸಹಿತ ತರಬೇತಿಗಳನ್ನು ಆಯೋಜಿಸಲು ಉದ್ದೇಶಿಸಿದ್ದು ವಿವರಗಳು ಈ ಕೆಳಕಂಡಂತಿವೆ.

| ಕ್ರ.ಸಂ | ತರಬೇತಿ | ಅವಧಿ | ಅಭ್ಯರ್ಥಿಗಳು ಪ್ರತಿ ಬ್ಯಾಚ್‌ಗೆ | ಒಟ್ಟು ತರಬೇತಿ | ವಿದ್ಯಾರ್ಹತೆ |
|---|---|---|---|---|---|
| 1. | ತ್ಯಾಜ್ಯ ಹಾಗೂ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳು-ತಂತ್ರಜ್ಞರು | 25 ದಿವಸಗಳು | 30 | 07 | ಡಿಪ್ಲೊಮೊ ಅಥವಾ ಬಿ.ಟೆಕ್ ತೇರ್ಗಡೆ |

ತರಬೇತಿಗಳು ಸೆಪ್ಟಂಬರ್ 2020ರ ಮೊದಲನೇ ವಾರದಲ್ಲಿ ಪ್ರಾರಂಭಿಸಲು ಯೋಜಿಸಲಾಗಿದ್ದು, ತಮ್ಮ ನಿರ್ದೇಶನಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಡಿಪ್ಲೊಮೋ ಕಾಲೇಜುಗಳಿಗೆ ತರಬೇತಿಯ ಬಗ್ಗೆ ಮಾಹಿತಿ ನೀಡುವುದರ ಮೂಲಕ ನಿರುದ್ಯೋಗಿ ಯುವಕ/ಯುವತಿಯರಿಗೆ ಈ ಸದಾವಕಾಶವನ್ನು ಬಳಸಿಕೊಳ್ಳಲು ಕೋರಬಹುದಾಗಿದೆ. ತರಬೇತಿ ಕಾರ್ಯಕ್ರಮದ ಬಗ್ಗೆ

...2

ಸಮಗ್ರ ಮಾಹಿತಿಯನ್ನು ಎಂಸಿ ಸಂಸ್ಥೆಯ ಜಾಲತಾಣದಲ್ಲಿ ವೀಕ್ಷಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿಯ ಮೂಲಕವೂ ಸಹ ಸಂಪರ್ಕಿಸಬಹುದಾಗಿದೆ. ಕಛೇರಿ ದೂರವಾಣಿ – 080 26490746/47 / 9449987547.

ವಂದನೆಗಳೊಡನೆ.

ತಮ್ಮ ವಿಶ್ವಾಸಿ

ಮಹಾ ನಿರ್ದೇಶಕರು

ಪ್ರತಿಯನ್ನು:

ನಿರ್ದೇಶಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿದೆ

-: ಅಂಬರಿಷ :-

ಸದರಿ ತರಬೇತಿಯ ಮಾಹಿತಿಯನ್ನು ಸಂಸ್ಥೆಯ ಸೂಚನಾ ಫಲಕದಲ್ಲಿ ಪ್ರಕಟಿಸಿ ವಿದ್ಯಾರ್ಥಿಗಳ ಗಮನಕ್ಕೆ ತರಲು ಈ ಮೂಲಕ ತಿಳಿಸಲಾಗಿದೆ.

ಜಂಟಿ ನಿರ್ದೇಶಕರು (ಪ್ರವಿ)

ಇವರಿಗೆ: 1) ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.

2) ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ - ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಮುಂದಿನ ಕ್ರಮಕ್ಕಾಗಿ.